International Journal of Academic Research
ISSN: 2348-7666; Vol.5, Issue-10, October, 2018
Impact Factor: 6.023; Email: drtvramana@yahoo.co.in

ಡಾ. ರೂಪ ಎಂ.ಪಿ.
ಕನ್ನಡ ಸಹಾಯಕ ಪ್ರಾಧ್ಯಾಪಕರು.
ಸ.ಪ್ರ.ದ.ಮಹಿಳಾ ಕಾಲೇಜು, ರಾಮನಗರ.
ಮೊಬೈಲ್ ನಂ.೯೭೪೦೦೭೭೨೦೯.
ಈ ಮೇಲ್; roopaharushi@gmail.com.

# ಭಾರತದಲ್ಲಿ ವಸಾಹತುಷಾಹಿಪೂರ್ವದಲ್ಲಿ ಮಹಿಳಾ ಸ್ಥಾನಮಾನ

ಮಹಿಳೆ ಆದಿಕಾಲದಿಂದಲೂ ತನ್ನನ್ನು ಶಕ್ತಿ ಸ್ವರೂಪಿಣಿಯಾಗಿ ಗುರುತಿಸಿ ಕೊಂಡವಳು ಎಂತಹ ಕೆಲಸವನ್ನು ತನ್ನ ಬುದ್ಧಿ ಸಾಮರ್ಥ್ಯದಿಂದ ಮತ್ತು ದೈಹಿಕ ಶ್ರಮದಿಂದ ಪೂರೈಸುವ ಚಾಕಚಕ್ಯತೆ ಅವಳಲ್ಲಿತ್ತು. ಆದಿಮ ಸಮಾಜದಲ್ಲಿ ಹೆಣ್ಣಿಗೆ ಈ ಕಾರಣಕ್ಕಾಗಿ ವಿಶೇಷ ಸ್ಥಾನಮಾನವೂ ಇತ್ತು. ಅಲೆಮಾರಿಗಳಾಗಿ ಜೀವಿಸುತ್ತಿದ್ದ ಆರಂಭದ ಮಾನವ ಬದುಕಿನಲ್ಲಿ ಸ್ತ್ರೀ ಮಹತ್ವದ ಪಾತ್ರ ವಹಿಸಿದ್ದಳು. ಆದರೆ ಸ್ತ್ರೀ ಎಲ್ಲಾ ಕಾಲದಲ್ಲಿಯೂ ಪುರುಷರ ಸರಿಸಮಾನವಾಗಿ ನಿಂತು ದುಡಿಯಲು ಸಾಧ್ಯವಾಗುತ್ತಿರಲಿಲ್ಲ. ಕಾರಣ ಆಕೆಯ ದೈಹಿಕ ಪ್ರಕೃತಿ. ಪ್ರಕೃತಿ ಸ್ತ್ರೀ ಪುರುಷರನ್ನು ಸೃಷ್ಟಿಸುವಾಗ ಕೆಲವೊಂದು ಗುಣಲಕ್ಷಣಗಳನ್ನು ನೀಡಿದೆ. ಸ್ತ್ರೀಯ ಅಂಗಗಳಿಗೂ, ಪುರುಷನ ಅಂಗಾಂಗಗಳಿಗೂ ಜೈವಿಕವಾಗಿ ವ್ಯತ್ಯಾಸವಿದೆ. ಸ್ತ್ರೀಯ ಜೈವಿಕ ವ್ಯತ್ಯಾಸದಿಂದಾಗಿಯೇ ಅವಳು ಪ್ರೌಢವಸ್ಥೆಗೆ ಕಾಲಿಟ್ಟಾಗ, ಋತುಮತಿಯಾದಾಗ ಅವಳು ಒಂದೆಡೆ ನೆಲೆ ನಿಂತು ವಿಶೇಷ ಆರೈಕೆಗೆ ಒಳಗಾಗಬೇಕಿತ್ತು. ಹಾಗೆಯೇ ಅವಳು ಸಂತಾನಾಭಿವೃದ್ಧಿಯ ಸಮಯದಲ್ಲಿಯೂ ಹೊರಗೆ ಹೋಗಿ ದುಡಿಯಲು ಸಾಧ್ಯವಾಗುತ್ತಿರಲಿಲ್ಲ.

ಈ ಘಟ್ಟದಲ್ಲಿಯೇ ಮಹಿಳೆಗೆ ಒಂದು ವಸತಿಯನ್ನು ಕಲ್ಪಿಸುವ ತುರ್ತು ಒದಗುತ್ತಿದ್ದುದರಿಂದ ಒಂದೆಡೆ ನೆಲೆ ನಿಲ್ಲುವ ಆಲೋಚನೆ ಶುರುವಾಯಿತು. ಸ್ತ್ರೀ ಮನೆಯಲ್ಲಿದ್ದುಕೊಂಡೆ ಸಣ್ಣಪುಟ್ಟ ಹೊರಗಿನ ಕೆಲಸಗಳನ್ನು ನಿರ್ವಹಿಸುತ್ತಿದ್ದಳು.

> "ಶಿಲಾಯುಗದ ಹೆಣ್ಣಿಗೆ ಮುಟ್ಟು, ಸಂಭೋಗ, ಗರ್ಭಧರಿಸುವಿಕೆ, ಮಕ್ಕಳನ್ನು ಹಡೆಯುವುದು ಮುಂತಾದ ಜೈವಿಕ ಕ್ರಿಯೆಗಳ ಸಂದರ್ಭದಲ್ಲಿ ಕೆಲಸಮಯವಾದರೂ ಒಂದೆಡೆ ಉಳಿಯಬೇಕಾದ ಅನಿವಾರ್ಯತೆ ಉಂಟಾಗಿದೆ. ಬಹುಶಃ ಹೆಣ್ಣು ಆ ಹೊತ್ತಿನಲ್ಲಿ ಪುರುಷನೊಂದಿಗೆ ಬೇಟೆಗಾಗಿ ಕಾಡು–ಮೇಡು ಸುತ್ತಲಾಗದ ಪರಿಸ್ಥಿತಿಗೆ ಒಳಗಾಗಿದ್ದಾಳೆ. ಇಂಥ ಜೈವಿಕ ಅಡಚಣೆಗಳನ್ನು ನಿವಾರಿಸಿಕೊಳ್ಳಲು ಸಾಂದರ್ಭಿಕವಾಗಿ ಆದಿಮಾನವ ಸುರಕ್ಷಿತ ಪ್ರದೇಶಗಳನ್ನು ಹುಡುಕಿಕೊಂಡಿರಬಹುದು. ಅವುಗಳೆಂದರೆ, ಕಲ್ಲಿನ ಗುಹೆ– ಮರದ ಪೊಟರೆ, ನದಿ ತೀರದಲ್ಲಿನ ಪೊದೆಗಳು ವಾಸ್ತವ್ಯಕ್ಕೆ ಅನುಕೂಲವಾಗಿ ಕಂಡಿರಬೇಕು. ಆಗ ಪುರುಷ ಹೆಣ್ಣನ್ನು ಒಂದೆಡೆ ಸುರಕ್ಷಿತವಾಗಿ ಬಿಟ್ಟು ತಾನು ಬಿಲ್ಲು ಬಾಣ ಕಲ್ಲಿನ ಆಯುಧಗಳನ್ನು ಹಿಡಿದು ಬೇಟೆಯಾಡಿ ಆಹಾರ ಪದಾರ್ಥಗಳನ್ನು ತಂದು ಹೆಣ್ಣಿಗೆ ನೀಡಿರುವಂತೆ ತೋರುತ್ತದೆ. ಇದರಿಂದಾಗಿ ಹೆಣ್ಣಿನಲ್ಲಿ ಮೂಲಭೂತವಾಗಿರುವ ಮಗುವಿನ ಲಾಲನೆ–ಪಾಲನೆ, ಆರೈಕೆಗಳು ತನ್ನನ್ನು ಭೋಗಿಸುವ ಗಂಡಸಿಗೂ ವಿಸ್ತರಿಸಿ ಕೊಂಡಂತೆ ಕಾಣುತ್ತದೆ. ಗಂಡು ಹೊರಗೆ ಆಹಾರ ಸಂಪಾದಿಸುವುದು, ಹೆಣ್ಣು ಆತ ಸಂಪಾದಿಸಿ ತಂದದ್ದನ್ನು ಬೇಯಿಸಿ (ಆ ವೇಳೆಗಾಗಲೇ ಬೆಂಕಿಯ ಉಪಯೋಗ ತಿಳಿದಿತ್ತು) ರುಚಿಗೊಳಿಸಿ ಹೊರಗಿನಿಂದ ಬಂದ ಗಂಡನನ್ನು ಮೃದು ಮಾತಿನಿಂದ ಪ್ರಸನ್ನಗೊಳಿಸಿ ಸಿದ್ಧ ಆಹಾರ ನೀಡಿ ಉಪಚರಿಸಿರ'ಬಹುದು. ಇದರಿಂದಾಗಿ

ಗೃಹಕೃತ್ಯದ ಸಕಲ ಹೊಣೆಯನ್ನು ಹೊತ್ತ ಹೆಣ್ಣಿಗೆ ಯಜಮಾನಿಯ ಪಟ್ಟ ದೊರೆತು ಮಾತೃ ಪ್ರಧಾನ ಕುಟುಂಬಗಳು ಬೆಳೆಯಲಾರಂಭಿಸಿದವು." (ಪುಟ 17, ಮಹಿಳಾ ಚಳುವಳಿ, ಹಾಲತಿ ಸೋಮಶೇಖರ್).

ಪ್ರಕೃತಿಯ ಮುಂದೆ ಸ್ತ್ರೀ ಪುರುಷರಿಬ್ಬರೂ ಸಮಾನರು. ಇಬ್ಬರು ಪರಸ್ಪರ ಹೊಂದಿಕೊಂಡು ಬಾಳುವೆ ಮಾಡಬೇಕೆಂದು ಅದು ಬಯಸುತ್ತದೆ. ಎಲ್ಲಾ ಕೆಲಸ ಕಾರ್ಯಗಳಲ್ಲಿಯೂ ಇಬ್ಬರು ಸಮಭಾಗಿಗಳು. ಆದರೆ ಹೆಣ್ಣು ಒಂದೆಡೆ ನೆಲಸಿ ಕೆಲಸ ಕಾರ್ಯಗಳಿಗೆ ತೊಡಗಿದಂತೆ ಅವಳನ್ನು ಅಲ್ಲಿಗೆ ಸೀಮಿತಗೊಳಿಸಲಾಯಿತು. ಹೆಣ್ಣು ಉತ್ಪಾದನಾ ಕ್ಷೇತ್ರದಿಂದ ದೂರ ಸರಿದು ಕೌಟುಂಬಿಕ ವಲಯದಲ್ಲಿ ಸೇವೆಗೆ ನಿಂತಂದಿನಿಂದ ಪುರುಷ ತಾನು ಶ್ರೇಷ್ಠ ಹೆಣ್ಣು ಕನಿಷ್ಠ ಎಂಬ ಭಾವನೆಗೆ ಒಳಗಾದನು.

ಹೊರಗೆ ಕಷ್ಟಪಟ್ಟು ದುಡಿದು ಮಾಡಿ ಕುಟುಂಬವನ್ನು ಸಾಕುವವನು ನಾನು ಎಂಬ ಧೋರಣೆ ಪುರುಷನಲ್ಲಿ ಮೂಡಿದಂದಿನಿಂದ ಕುಟುಂಬದ ಒಡೆತನವೂ ಪುರುಷನಿಂದ ಸೂಚಿಸಲ್ಪಟ್ಟಿತ್ತು. ಮನೆಯ ಯಜಮಾನ ಪುರುಷನಾಗಿ ಪಿತೃ ಪ್ರಧಾನ ಸಮಾಜಗಳು ಸೃಷ್ಟಿಯಾದವು. ಕುಟುಂಬದಲ್ಲಿ ಸ್ತ್ರೀಯ ಸ್ಥಾನಮಾನ ಕೇವಲ ಗಂಡನ ಭೋಗಲಾಲಸೆಗಳನ್ನು ಪೂರೈಸಿಕೊಂಡು ಮಕ್ಕಳ ಪೋಷಣೆ ಮಾಡಿಕೊಂಡು ಪುರುಷನ ಏಳಿಗೆಗೆ ಶ್ರಮಿಸುವುದು ಎಂದಾಯಿತು.

ಸ್ತ್ರೀ ಪುರುಷರಿಬ್ಬರೂ ಒಂದೆಡೆ ನೆಲೆ ನಿಂತು ಸಂಸ್ಕೃತಿ ಬೆಳೆಯಲು ಆರಂಭವಾದಾಗ ಅಲ್ಲಿಯೂ ಸ್ತ್ರೀಗೆ ಮೊದಲ ಸ್ಥಾನವಿತ್ತು. ಹೆಣ್ಣನ್ನು ಆದಿಶಕ್ತಿಯೆಂದು ಪೂಜಿಸಲಾಗುತ್ತಿತ್ತು. ಸ್ತ್ರೀ ದೇವತೆಗಳಿಗೆ ಮಾನ್ಯತೆಯಿತ್ತು. ಕೃಷಿ ಪ್ರಧಾನ ನಾಗರೀಕ ಸಮಾಜದಲ್ಲಿ ಮಾತೃ ಪ್ರಧಾನ ಕುಟುಂಬಗಳು ಕಂಡುಬಂದರೂ ಆನಂತರದಲ್ಲಿ ಅವೆಲ್ಲವೂ ಪುರುಷ ಪ್ರಧಾನ ಕುಟುಂಬಗಳಾಗಿ ಪರಿವರ್ತನೆ ಹೊಂದಿರುವುದಕ್ಕೆ ದಾಖಲೆಗಳು ಲಭ್ಯವಿದೆ. ನಾಗರೀಕತೆ ಬೆಳೆದಂತೆಲ್ಲಾ ಸ್ತ್ರೀ ಪುರುಷರ ನಡುವಿನ ಅಸಮಾನತೆಯೂ ದೊಡ್ಡದಾಗುತ್ತ ಹೋಯಿತು. ನಾಗರೀಕತೆಯ ಜೊತೆ ಜೊತೆಗೆ ಹಲವು ಸಂಸ್ಥೆಗಳು ಇಲ್ಲಿ ಗಟ್ಟಿಯಾದ ಸ್ಥಾನ ಪಡೆದುಕೊಂಡವು.

ಗಂಡ ಹೆಂಡತಿ ಒಂದಾಗಿ ಸಂಸಾರ ಮಾಡಲು 'ವಿವಾಹ' ವೆಂಬ ಸಂಸ್ಥೆ ನಿರ್ಮಾಣವಾಯಿತು. ಗಂಡು ಹೆಣ್ಣುಗಳಿಗೆ ಸಹಜವಾಗಿರುವ ಲೈಂಗಿಕ ಅಪೇಕ್ಷೆಯನ್ನು ಪೂರೈಸಲು ಅದಕ್ಕೊಂದು ವ್ಯವಸ್ಥಿತ ಯೋಜನೆಯಾಗಿ 'ವಿವಾಹ' ವ್ಯವಸ್ಥೆಯನ್ನು ರೂಪಿಸಲಾಯಿತು. ಅವರಿಬ್ಬರೂ ತಮ್ಮ ಅಂತ್ಯದವರೆಗೂ ಪರಸ್ಪರ ಜೋಡಿಗಳಾಗಿ ಬೆರೆತು ಮಕ್ಕಳನ್ನು ಹೆತ್ತು ಮುಂದಿನ ಪೀಳಿಗೆ ಬೆಳೆಯಲು ಅವಕಾಶ ಕಲ್ಪಿಸಲಾಯಿತು. ಹೀಗಾಗಿ ವಿವಾಹದ ಜೊತೆ ಜೊತೆಗೆ 'ಕುಟುಂಬ' ವ್ಯವಸ್ಥೆಯೂ ನಿರ್ಮಾಣವಾಯಿತು.

ವಿವಾಹಿತರಾದ ಗಂಡು ಹೆಣ್ಣುಗಳು ಒಂದಾಗಿ ಬೆರೆತು ತಮ್ಮಿಬ್ಬರಿಗೂ ಹುಟ್ಟಿದ ಮಕ್ಕಳೊಂದಿಗೆ ಒಂದೇ ಸೂರಿನಡಿಯಲ್ಲಿ ಜೀವಿಸಲು 'ಕುಟುಂಬ' ಸಹಕಾರಿಯಾಯಿತು. ಮಕ್ಕಳ ಜವಾಬ್ದಾರಿಯು ಆ ತಂದೆ–ತಾಯಿಗಳಿಗೇ ಸೇರಿದ್ದಾಗಿತ್ತು. ತಂದೆ ಹೊರಗೆ ದುಡಿದುಕೊಂಡು ಬಂದರೆ ತಾಯಿಗೆ ಮಕ್ಕಳನ್ನು ಸಾಕಿ ಸಲಹುವ ಸೇವಾ ಜವಾಬ್ದಾರಿಯನ್ನು ವಹಿಸಲಾಯಿತು.

ಹೀಗೆ ಹಲವು ಕುಟುಂಬಗಳು ಒಂದೆಡೆ ಸೇರಿ ಹೊಂದಾಣಿಕೆ ಮಾಡಿಕೊಂಡ ಜನಸಮೂಹವನ್ನು ನಾವು 'ಸಮಾಜ' ಎಂದು ಗುರುತಿಸುತ್ತೇವೆ. ಹಲವು ಕುಟುಂಬಗಳು ಒಂದೆಡೆ ನೆಲೆ ನಿಂತ ಜಾಗವನ್ನು ನಾವು 'ಗ್ರಾಮ'ಗಳೆಂದು ಕರೆದಿದ್ದೇವೆ. ಹೀಗೆ ಗ್ರಾಮಗಳಲ್ಲಿ ವಾಸ ಮಾಡುವ ಜನ ಎಲ್ಲರೂ ಸಂಘಟಿತರಾಗಿ ಸಂಘಜೀವಿಗಳಾಗಿ ವಾಸಿಸಲು ಕೆಲವು ನೀತಿ ನಿಯಮಗಳನ್ನು ರೂಢಿ ಪದ್ಧತಿಗಳನ್ನು ರೂಪಿಸಿಕೊಂಡರು. ಒಂದು ಕುಟುಂಬ ಸುಖೀ ಕುಟುಂಬವಾಗಲು ಹೇಗೆ ಮನೆಯಲ್ಲಿನ ಗಂಡ–ಹೆಂಡತಿ ಮಕ್ಕಳೆಲ್ಲರೂ ಹೊಂದಾಣಿಕೆ ಮಾಡಿಕೊಂಡು ತಮ್ಮ ಜವಾಬ್ದಾರಿಗಳನ್ನರಿತು ವಾಸಿಸುತ್ತಾರೋ ಹಾಗೆಯೇ ಗ್ರಾಮಗಳಲ್ಲಿನ ಜನರೆಲ್ಲರೂ ಒಂದಾಗಿ ಬಾಳಲು ಕೆಲವೊಂದು ರೂಢಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು ಅನಿವಾರ್ಯವಾಯಿತು.

ಮಾತೃಪ್ರಧಾನ ಸಮಾಜ ಪಿತೃಪ್ರಧಾನ ಸಮಾಜವಾಗಿ ಮಾರ್ಪಾಡು ಹೊಂದಿ ವಿವಾಹ ಮತ್ತು ಕುಟುಂಬಗಳಲ್ಲಿಯೂ ಪುರುಷ ಪ್ರಧಾನ್ಯತೆಯೇ ನೆಲೆ ನಿಂತಿತ್ತು. ಇಂತಹ ಜನಸಮುದಾಯಗಳನ್ನು ನಿರ್ದೇಶಿಸಲು ಕೇಂದ್ರೀಕರಿಸಲು 'ಧರ್ಮ' ಸೃಷ್ಟಿಯಾಯಿತು.

ಭಾರತಕ್ಕೆ ಆರ್ಯರ ಆಗಮನವಾದ ಮೇಲೆ ಭಾರತದ ಮೂಲನಿವಾಸಿಗಳಾದ ದ್ರಾವಿಡರು ದಕ್ಷಿಣದ ಕಡೆಗೆ ವಲಸೆ ಬಂದರು. ಆರ್ಯರು ಉತ್ತರ ಭಾರತದಲ್ಲಿ ನೆಲೆಸಿದರು. ಹೀಗಾಗಿ ಭಾರತದಲ್ಲಿ ಆರ್ಯ ದ್ರಾವಿಡ ಸಂಸ್ಕೃತಿ ಬೆಳೆಯಿತು. ಈ ಮಿಶ್ರ ಸಂಸ್ಕೃತಿಯ ಫಲವೇ ವೇದಗಳು. ಹಿಂದೂ ಧರ್ಮವು ವೇದಗಳು, ಪುರಾಣಗಳು, ಉಪನಿಷತ್ತುಗಳು, ಬ್ರಾಹ್ಮಣಕಗಳು, ಧರ್ಮಸೂತ್ರಗಳು, ನ್ಯಾಯಸೂತ್ರಗಳು, ಸ್ಮೃತಿಗಳ ಮೂಲಕ ಪುರುಷ ಪರ ನೀತಿಯನ್ನು ಸಮಾಜಕ್ಕೆ ಅಳವಡಿಸಿತು. ಈ ಧಾರ್ಮಿಕ ಕೃತಿಗಳ ಮೂಲಕವು ಅಂದಿನ ಸ್ತ್ರೀಯರ ಸ್ಥಾನಮಾನಗಳನ್ನು ಅರಿಯಬಹುದಾಗಿದೆ. ಆರಂಭದ ವೇದವಾದ ಋಗ್ವೇದದಲ್ಲಿ ಸ್ತ್ರೀಯ ಸ್ಥಾನಮಾನವು ಉತ್ತಮವಾಗಿತ್ತು.

"ಸ್ತ್ರೀ–ಪುರುಷರ ಸಂಬಂಧಗಳ ಮೇಲೆ ವೇದಗಳ ಕಾಲದಲ್ಲಿ ವಿಪರೀತ ಕಟ್ಟುಪಾಡುಗಳಿರಲಿಲ್ಲ. ಬಾಲ್ಯವಿವಾಹವೂ ರೂಢಿಯಲ್ಲಿರಲಿಲ್ಲ. ಮದುವೆಗೆ ಮೊದಲೇ ಮಗಳು ಋತಿಮತಿಯಾದರೆ ಅವಳ ತಾಯಿ ತಂದೆಯರು ನರಕಕ್ಕೆ ಹೋಗುವರೆಂಬ ನಂಬಿಕೆಗಳಿರಲಿಲ್ಲ. ಸ್ತ್ರೀಯರಲ್ಲಿ ಮದುವೆಯಾಗಲೇಬೇಕೆಂಬ ಕಟ್ಟಳೆಗಳಿರಲಿಲ್ಲ. ಒಂದು ವೇಳೆ ಮದುವೆಯಾಗದೆ ಉಳಿದರೆ ಹುಟ್ಟಿದ ಮನೆಯಲ್ಲಿಯೇ ಯಾವ ಸಾರ್ವಜನಿಕ ಖಂಡನೆಯಿಲ್ಲದೆ ಸುಖವಾಗಿರಬಹುದಿತ್ತು. ಯಾವುದೇ ಹೆಣ್ಣನ್ನು ಮದುವೆಯಾದ ಗಂಡು ಒಂದು ವೇಳೆ ಯುದ್ಧ ಬೇಟೆ ಕಾಯಿಲೆ ಇಲ್ಲವೇ ಸ್ವಾಭಾವಿಕವಾಗಿಯೇ ಸಾವನ್ನಪ್ಪಿದರೆ ಆತನ ಅಣ್ಣಂದಿರಾಗಲಿ ಅಥವಾ ತಮ್ಮಂದಿರಾಗಲಿ ಆಕೆಯನ್ನು ವಿವಾಹವಾಗಬಹುದಿತ್ತು. ಸತ್ತು ಹೋದ ಗಂಡನನ್ನು ನೆನೆದು ಪ್ರಲಾಪಿಸುತ್ತಿರುವ ವಿಧವೆಯನ್ನು ಸತ್ತವನ ತಮ್ಮ ಸಮಾಧಾನ ಹೇಳಿ ಸತ್ತವನನ್ನು ಮರೆತು ಯಥಾಪ್ರಕಾರ ಜೀವನ ಸಾಗಿಸಬೇಕೆಂದು ಉಪದೇಶ ಮಾಡಿ ತನ್ನ ಮನೆಗೆ ಕರೆದೊಯ್ಯುವುದು ಋಗ್ವೇದದಲ್ಲಿ ಬರುತ್ತದೆ. ಮದುವೆಯಾದ ನಾಲ್ಕು ದಿನದಲ್ಲಿಯೇ ನವದಂಪತಿಗಳು ಸಮಾಗಮಗೊಳ್ಳುತ್ತಿದ್ದರು ಎಂಬ ಉಲ್ಲೇಖವಿರುವುದರಿಂದ ಬಾಲ್ಯವಿವಾಹ ಪದ್ಧತಿ ಇರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಯುವಕ–ಯುವತಿಯರೇ ಆಗಿನ ಕಾಲದಲ್ಲಿ ವಿವಾಹವಾಗುತ್ತಿದ್ದರು ಎಂಬುದು ತಿಳಿದು ಬರುತ್ತದೆ". (ಪುಟ27, ಮಹಿಳಾ ಚಳುವಳಿ, ಹಾಲತಿ ಸೋಮಶೇಖರ್.)

ಆರಂಭದ ವೇದದ ಕಾಲದಲ್ಲಿ ಸ್ತ್ರೀ–ಪುರುಷರ ಸ್ಥಾನಮಾನಗಳಲ್ಲಿ ಅಂತಹ ಏರುಪೇರುಗಳಿಲ್ಲದಿದ್ದರೂ ನಂತರದ ವೇದಗಳ ಕಾಲದಲ್ಲಿ ಇವರಿಬ್ಬರ ನಡುವಿನ ಅಸಮಾನತೆಯಲ್ಲಿ ಭಾರಿ ಅಂತರ ಏರ್ಪಟ್ಟಿರುವುದನ್ನು ಕಾಣಬಹುದು. ವೈದಿಕ ಶಿಕ್ಷಣವು ಕೇವಲ ಮೇಲ್ವರ್ಗದ ಪುರುಷರಿಗೆ ಮಾತ್ರ ಸೀಮಿತವಾಗಿತ್ತು. ಸ್ತ್ರೀಯರ ಮೇಲಿನ ನಿರ್ಬಂಧಗಳು ಹೆಚ್ಚಾಗ ತೊಡಗಿದವು. ಸ್ತ್ರೀಯ ಮೇಲೆ 'ಪಾವಿತ್ರ್ಯತೆ' ಯ ಆರೋಪವನ್ನು ಹೊರಿಸಿ ಅವಳು ಸದಾ ತನ್ನ ಪಾವಿತ್ರ್ಯವನ್ನು ಕಾಪಾಡಿ ಕೊಳ್ಳುವುದರಲ್ಲಿಯೇ ಮಗ್ನಳಾಗಬೇಕೆಂದು ಸೂಚಿಸಲಾಯಿತು. ಪುರುಷನ ಬದುಕು ಬಾಹ್ಯ ಜಗತ್ತಿಗೆ ವಿಸ್ತರಿಸಿದರೆ ಸ್ತ್ರೀಯ ಬದುಕು ಒಳಜಗತ್ತಿಗೆ ಮೀಸಲಾಯಿತು. ಸಭೆ ಸಮಾರಂಭಗಳಲ್ಲಿ ಅವಳು ಭಾಗವಹಿಸುವಂತಿರಲಿಲ್ಲ. ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುವಂತಿರಲಿಲ್ಲ. ಹೆಣ್ಣಿನ ಪಾವಿತ್ರ್ಯವನ್ನು ಕಾಪಾಡುವ ಸಲುವಾಗಿ ಅವಳನ್ನು ಚಿಕ್ಕವಯಸ್ಸಿನಲ್ಲಿಯೇ ಮದುವೆ ಮಾಡಲಾಗುತ್ತಿತ್ತು. ಅವಳು ಅಪ್ಪಿತಪ್ಪಿಯೂ ಪರಪುರುಷನನ್ನು ನೋಡಬಾರದೆಂದು ಈ ಬಾಲ್ಯವಿವಾಹದ ಮೂಲಕ ಅವಳನ್ನು ಕಟ್ಟಿಹಾಕಲಾಗಿತ್ತು. ಒಂದು ವೇಳೆ ಆ ಗಂಡ ತೀರಿಕೊಂಡರೆ ಪತಿಯೊಂದಿಗೆ ತಾನೂ ಚಿತೆಯೇರಬೇಕಾಗಿತ್ತು. ಹಾಗೊಂದು ವೇಳೆ ಅವಳಿಗಿಷ್ಟವಿಲ್ಲದಿದ್ದರೆ ಬಲವಂತವಾಗಿ ಅವಳನ್ನು ಚಿತೆಗೆ ತಳ್ಳಲಾಗುತ್ತಿತ್ತು. ಕೆಲವೊಮ್ಮೆ ಗಂಡ ಸತ್ತ ಕೂಡಲೇ ಕೆಂಪು ಸೀರೆಯನ್ನುಟ್ಟುಕೊಂಡು ಕೇಶ ಮುಂಡನ ಮಾಡಿಸಿಕೊಂಡು ಅಪಶಕುನದಂತೆ ಮನೆಯ ಮೂಲೆಯಲ್ಲಿ ಬಿದ್ದಿರಬೇಕಿತ್ತು. ವೇದಗಳ ನಂತರ ಬಂದ ಧರ್ಮಸೂತ್ರಗಳು ಸಹ ವರ್ಣಾಶ್ರಮ ಪದ್ಧತಿಯನ್ನು ಜಾರಿಗೆ ತಂದವು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂದು ನಾಲ್ಕು ವರ್ಣಗಳನ್ನು ಹೆಸರಿಸಿ ಈ ವರ್ಣಗಳಲ್ಲಿ ಮೊದಲಿಗರಾದ ಬ್ರಾಹ್ಮಣರೇ ಈ ಭೂಮಿಯಲ್ಲಿ ಶ್ರೇಷ್ಠರೆಂದು ಅವರ ನಿರ್ದೇಶನದಂತೆ ಉಳಿದ ಸಮುದಾಯಗಳು ನಡೆದುಕೊಳ್ಳಬೇಕೆಂದು ತೀರ್ಮಾನಿಸಲಾಯಿತು. ಎಲ್ಲಾ ವರ್ಣಗಳ ಸ್ತ್ರೀಯರು ಪುರುಷರ ಅಧೀನದಲ್ಲಿದ್ದುಕೊಂಡು ನಿಸ್ವಾರ್ಥ ಸೇವೆಯನ್ನು ಸಲ್ಲಿಸಬೇಕಿತ್ತು. ಈ ಕಾಲದಲ್ಲಿ ಸೃಷ್ಟಿಯಾದ ಸ್ಮೃತಿಗಳು ಹೆಣ್ಣನ್ನು ಹೇಗೆ ಪುರುಷ ತನ್ನ ಹತೋಟಿಯಲ್ಲಿಟ್ಟುಕೊಳ್ಳಬೇಕೆಂದು ನಿರ್ದೇಶಿಸಿದವು. ಹೆಣ್ಣಾದವಳು ಸಮಾಜದಲ್ಲಿ ಹೇಗೆ ಬದುಕಬೇಕೆಂದು ಸೂಚನೆಗಳನ್ನು ನೀಡಿದವು.

ಈ ಮೇಲಿನ ಎಲ್ಲಾ ಧರ್ಮಸೂತ್ರಗಳಿಗೆ ಕಳಸವಿಟ್ಟಂತೆ ಮನುಧರ್ಮ ಶಾಸ್ತ್ರವು ರಚನೆಯಾಯಿತು. ಮನು ತನ್ನ ಕಾಲದ ಆಚಾರ–ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ತನ್ನ ಕಾಲಕ್ಕೆ ಸೃಷ್ಟಿಯಾಗಿದ್ದ ಸಾಹಿತ್ಯವನ್ನು ಇಟ್ಟುಕೊಂಡು ಧರ್ಮಸೂತ್ರವನ್ನು ರೂಪಿಸಿದನು. ಈತನು ಹಾಕಿಕೊಟ್ಟ ಸೂತ್ರದಂತೆಯೇ ಇಂದಿಗೂ ಹೆಣ್ಣನ್ನು ಬಾಳುವಂತೆ ಹೇಳಲಾಗುತ್ತದೆ. ಮನುವು ತನ್ನ ಹಿಂದಿದ್ದ ಸಾಹಿತ್ಯವೆಲ್ಲವನ್ನು ಅಧ್ಯಯನ ಮಾಡಿ ಅಂತಿಮವಾಗಿ 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂದು ಹೇಳುತ್ತಾ ಮಗುವಾಗಿದ್ದಾಗ ತಂದೆಯ ಪೋಷಣೆಯಲ್ಲಿಯೂ, ಹೆಂಡತಿಯಾದಾಗ ಗಂಡನ ರಕ್ಷಣೆಯಲ್ಲಿಯೂ, ವಯಸ್ಸಾದಾಗ ಮಗನ ರಕ್ಷಣೆಯಲ್ಲಿಯೂ ಇದ್ದು ಸ್ತ್ರೀಯರು ಹುಟ್ಟಿನಿಂದ ಸಾಯುವವರೆಗೂ ಪರಾವಲಂಬಿಯಾಗಿಯೇ ಜೀವನ ನಡೆಸಬೇಕೆಂದು ಕಟ್ಟಪ್ಪಣೆ ಮಾಡಿದನು.

ಪುರುಷನನ್ನು ಅವಲಂಬಿಸಿಕೊಂಡೇ ಜೀವನ ಸಾಗಿಸುವ ಹೆಣ್ಣು ಅವನು ಹೇಳಿದಂತೆ ಕೇಳಿಕೊಂಡು ಬದುಕಬೇಕಾಯಿತು. ಪುರುಷರು ಸ್ತ್ರೀಯರ ಮೇಲೆ ಹಕ್ಕನ್ನು ಸ್ಥಾಪಿಸಬಹುದಿತ್ತು. ಹೆಣ್ಣು ಮದುವೆಯಾದ ಮೇಲೆ ಪುರುಷನ ಆಸ್ತಿಯೆಂದು ಪರಿಗಣಿತಳಾದಳು. ಸ್ತ್ರೀಯರು ಕಾಮಾಭಿಲಾಷೆಯುಳ್ಳವರಾದ್ದರಿಂದ ಅವರ ಬಗ್ಗೆ ಸದಾ ಎಚ್ಚರದಿಂದಿರಬೇಕು. ಅವರನ್ನು ಸದಾ

ನಿಯಂತ್ರಣದಲ್ಲಿಟ್ಟುಕೊಳ್ಳಬೇಕೆಂದು ಮನು ಸೂಚಿಸಿದ್ದಾನೆ. ಪುರುಷರನ್ನು ಶ್ರೇಷ್ಠರೆಂದು ಪರಿಗಣಿಸಿದ ಮನುಧರ್ಮಶಾಸ್ತ್ರ ಪುರುಷನಿಗೆ ಬಹುಪತ್ನಿತ್ವವನ್ನು, ಮಿಥುರ ವಿವಾಹವನ್ನು, ಹೊರಜಗತ್ತಿನಲ್ಲಿ ಸ್ವೇಚ್ಛೆಯಾಗಿ ಬದುಕುವ ಸ್ವಾತಂತ್ರ್ಯವನ್ನು ನೀಡಿತು. ಪುರುಷನ ಪರಮಾಧಿಕಾರವನ್ನು ಒಪ್ಪಿಕೊಂಡ ಸಮಾಜದಲ್ಲಿ ಸ್ತ್ರೀ ದ್ವಿತೀಯ ದರ್ಜೆಯವಳಾಗಿ ತನ್ನ ಮೌಲ್ಯವನ್ನು ಕಳೆದುಕೊಂಡು ಹಿಂಸೆ ದೌರ್ಜನ್ಯಗಳಿಗೆ ಬಲಿಯಾಗಬೇಕಾಯಿತು. ಬದುಕಿನ ವಿವಿಧ ಹಂತಗಳಲ್ಲಿ ಸ್ತ್ರೀ ಪುರುಷನ ಗುಲಾಮಳಾಗಿ ಜೀವನ ಸಾಗಿಸಬೇಕಿತ್ತು.

**ಸಾಹಿತ್ಯ:** ವೇದ, ಶಾಸ್ತ್ರ, ಆಗಮಗಳು, ಸ್ಮೃತಿಗಳು, ಧರ್ಮಸೂತ್ರಗಳು, ಹಾಕಿಕೊಟ್ಟ ಜಾಡಿನಲ್ಲಿಯೇ ರಚಿತವಾದವು ಕತೆ–ಕಾವ್ಯಗಳು. ಹಿಂದೂಧರ್ಮದ ಪ್ರಸಿದ್ಧವಾದ ಮಹಾಕಾವ್ಯಗಳೆಂದರೆ ರಾಮಾಯಣ ಮತ್ತು ಮಹಾಭಾರತ ಇವಲ್ಲದೆ ಪುರಾಣ, ಪುಣ್ಯಕತೆಗಳು, ಮಹಾಕಾವ್ಯಗಳಲ್ಲಿ ಬರುವ ಉಪಕತೆಗಳು ಎಲ್ಲವೂ ಅಂದಿನ ಧರ್ಮಕ್ಕೆ ಬದ್ಧವಾಗಿ ರಚನೆಯಾದವು.

'ರಾಮಾಯಣ' ಮಹಾಕಾವ್ಯದಲ್ಲಿ ರಾಮನ ದಿಗ್ವಿಜಯವೇ ಪ್ರಧಾನ ಭಿತ್ತಿಯಾಗಿದೆ. ರಾಮ ತನ್ನ ತಂದೆಯ ಮಾತನ್ನು ಉಳಿಸುವ ಸಲುವಾಗಿ ಹದಿನಾಲ್ಕು ವರ್ಷ ವನವಾಸ ಮಾಡಿ ಮುಂದೆ ಅಯೋಧ್ಯೆಯನ್ನು ಸುಖ ಸಮೃದ್ಧಿಯಿಂದ ಕಾಪಾಡಿದ ಮಹಾವೀರನಂತೆ ರಾಮನನ್ನು ಚಿತ್ರಿಸಲಾಗಿದೆ. ರಾಮನ ಹೆಂಡತಿಯಾದ ಸೀತೆ ಮಹಾಪತಿವ್ರತೆ. ರಾಮನು ತನ್ನ ತಂದೆಯ ಮಾತಿನಂತೆ ಹದಿನಾಲ್ಕು ವರ್ಷ ವನವಾಸಕ್ಕೆ ಹೋದಾಗ ಪತಿಯ ಜೊತೆಯಲ್ಲಿಯೇ ಸತಿ ಎಂಬ ಮಾತಿನಂತೆ ಅವನೊಂದಿಗೆ ತಾನೂ ವನವಾಸಕ್ಕೆ ಹೋಗುತ್ತಾಳೆ. ರಾವಣನು ಸೀತೆಯ ಸೌಂದರ್ಯಕ್ಕೆ ಮರುಳಾಗಿ ಅವಳನ್ನು ಅಪಹರಿಸಿದಾಗ ರಾಮ ಅವನನ್ನು ಹುಡುಕಿಕೊಂಡು ಹೋಗಿ ಅವನನ್ನು ಕೊಂದು ಸೀತೆಯನ್ನು ಪಡೆಯುತ್ತಾನೆ. ಸೀತೆ ರಾವಣನ ಬಳಿಯಿರುವಾಗಲೂ ರಾಮಧ್ಯಾನದಲ್ಲಿಯೇ ತೊಡಗಿ ತನ್ನ 'ಪಾತಿವ್ರತ್ಯ' ಧರ್ಮವನ್ನು ಮೆರೆಯುತ್ತಾಳೆ. ಇಷ್ಟಾದರೂ ಸೀತೆಯ ಪಾವಿತ್ರ್ಯವನ್ನು ಸಂಶಯಿಸಿ ಅವಳನ್ನು ಅಗ್ನಿಪರೀಕ್ಷೆ ಮಾಡಲು ರಾಮ ಮುಂದಾಗುತ್ತಾನೆ. ಈ ಅಗ್ನಿ ಪರೀಕ್ಷೆಯಲ್ಲಿ ಸೀತೆ ಪುನೀತೆಯೆಂಬ ಸತ್ಯ ಹೊರಬೀಳುತ್ತದೆ. ಕಟ್ಟಿಕೊಂಡ ಹೆಂಡತಿಯ ಪಾವಿತ್ರ್ಯವನ್ನು ಸಂಶಯಿಸುವ ರಾಮ ಲೋಕಪೂಜ್ಯನಾಗಿರುವುದು ಈ ಸಮಾಜದಲ್ಲಿ ಮನ್ನಿತವಾಗಿದೆ. ಅಬಲೆಯರಾದ ಸೀತೆಯಂತಹ ಎಷ್ಟೋ ಹೆಣ್ಣು ಮಕ್ಕಳು ಗಂಡಂದಿರ ಸಂಶಯವೆಂಬ ಬೆಂಕಿಗೆ ಆಹುತಿಯಾಗುತ್ತಿದ್ದರೂ ಅಂತಹ ಪುರುಷರು ಇಂದಿಗೂ ಲೋಕಮಾನ್ಯರಾಗಿದ್ದಾರೆ.

ಮಹಾಭಾರತದಲ್ಲಿ ದ್ರೌಪದಿಯ ಪಾಡು ಇದೇ ಆಗಿದೆ. ಪಂಚ–ಪಾಂಡವರು ಪರಮವೀರರೂ ಎಂದೆಲ್ಲಾ ಖ್ಯಾತಿ ಗಳಿಸಿರುವ ಇವರು ತಮ್ಮ ಹೆಂಡತಿಯಾದ ದ್ರೌಪದಿಯನ್ನು ನಡೆಸಿಕೊಂಡ ರೀತಿ ತುಂಬಾ ಅವಮಾನಕರವಾಗಿದೆ. ಧರ್ಮರಾಯ ತನ್ನ ಹೆಂಡತಿಯನ್ನು ಪಣವಾಗಿಟ್ಟು ಪಗಡೆಯಾದಿ ಸೋತು ಅವಳನ್ನು ಶತ್ರುಗಳಿಗೆ ಒಪ್ಪಿಸುತ್ತಾನೆ. ದುರ್ಯೋಧನ ದುಶ್ಯಾಸನರು ತುಂಬಿದ ಸಭೆಯೊಳಗೆ ಅವಳ ಸೀರೆಯನ್ನೆಳೆದು ಅಪಮಾನ ಮಾಡುವಾಗ ಏನು ನಡೆಯದವರಂತೆ ಮೂಕ ಪ್ರೇಕ್ಷಕರಾಗಿ ಕುಳಿತಿರುತ್ತಾರೆ. ಆದರೆ ದ್ರೌಪದಿ ಪತಿವ್ರತೆಯಾದರೂ ತನಗೂ ರೋಷ ದ್ವೇಷಗಳಿವೆಯೆಂಬುದನ್ನು ಸಾಬೀತುಪಡಿಸುತ್ತಾಳೆ. ತನಗೆ ಅಪಮಾನ ಮಾಡಿದ ಕೌರವರನ್ನು ಯುದ್ಧದಲ್ಲಿ ಸೋಲುವಂತೆ ಮಾಡಿ ಅವರ ರಕ್ತದಿಂದ ತನ್ನ ಮುಡಿ ಕಟ್ಟಿಕೊಳ್ಳುತ್ತಾಳೆ. ಆದರೂ ಮಹಾಭಾರತದಲ್ಲಿ ದ್ರೌಪದಿ ಪಾತ್ರಗಳಿಗಿಂತಲೂ ಮಿಗಿಲಾಗಿ ಗಾಂಧಾರಿಯಂತಹ ಪಾತ್ರಗಳು

ವಿಜ್ರಂಭಿಸುತ್ತವೆ. ಗಾಂಧಾರಿಯಂತೆ ಗಂಡನಿಗೆ ಕಣ್ಣಿಲ್ಲವೆಂಬ ಕಾರಣಕ್ಕಾಗಿ ತಾನು ಕಣ್ಣಿದ್ದು ಕುರುಡಿಯಂತೆ ಜೀವಿಸುತ್ತಾಳೆ. ಪತಿವ್ರತೆಯಾದವಳು ಸಮಾಜದಲ್ಲಿ ಹೀಗೆ ಬಾಳಬೇಕೆಂಬ ಪ್ರತಿಮೆಯನ್ನು ನೀಡಲಾಗಿದೆ.

ಪತಿವ್ರತಾಧರ್ಮ ಪರಮಶ್ರೇಷ್ಠವಾದುದು. ಸತಿಯಾದವರು ಗಂಡನನ್ನಲ್ಲದೆ ಅನ್ಯ ಪುರುಷರನ್ನು ಸೋದರರರಂತೆ ಗುರು ಹಿರಿಯರಂತೆ ಭಾವಿಸಬೇಕು. ಸದಾಕಾಲ ಗಂಡನನ್ನು ಸೇವಿಸುತ್ತಿರಬೇಕು. ಗಂಡನೇ ದೈವವೆಂದು ಪೂಜಿಸಬೇಕು. ಗಂಡನ ಮಾತನ್ನು ಮೀರದೆ ತನ್ನ ಸಮಸ್ತ ಸುಖವನ್ನು ಅವನಿಗೆ ಮೀಸಲಿಡಬೇಕು. ತನ್ನ ಗಂಡನ ಸುಖ–ದುಃಖಗಳಲ್ಲಿ ಸಮಭಾಗಿಯಾಗಿ ಅವನಿಗಿಲ್ಲದ ಯಾವ ಸುಖವನ್ನು ತಾನು ಬಯಸದೆ ಅವನೊಂದಿಗಿರಬೇಕು. ಇದನ್ನೇ 'ಪತಿವ್ರತಾಧರ್ಮ'ವೆಂದು ಹೇಳಿ ಮದುವೆಯಾದ ಎಲ್ಲಾ ಸ್ತ್ರೀಯರು ಇದನ್ನು ಚಾಚು ತಪ್ಪದೆ ಪಾಲಿಸಬೇಕೆಂದು ಈ ಮಹಾಕಾವ್ಯಗಳು ಪುರಾಣಗಳು ಹೇಳುತ್ತವೆ. ಪತಿವ್ರತಾ ಧರ್ಮ ಪಾಲಿಸುವವರಿಗೆ ಉನ್ನತ ಶಕ್ತಿ ಲಭಿಸುವುದೆಂದು ಹೇಳಲಾಗಿದೆ.

ಅಗಸ್ತ್ಯ ಮಹರ್ಷಿ ತಪಸ್ಸು ಮಾಡಿ ಜ್ಞಾನವನ್ನು ಸಂಪಾದಿಸಿದ ಮಹಾಪುರುಷ ಆತನ ಹೆಂಡತಿ ಲೋಪಾಮುದ್ರೆ, ಮಹಾಪತಿವ್ರತೆ. ಅಗಸ್ತ್ಯ ತನಗೆ ಆಯಾಸವಾಯಿತೆಂದು ಸಂಧ್ಯಾವಂದನೆ ಮಾಡಲು ಗಂಗೆಯ ಬಳಿಗೆ ಹೋಗುವುದಕ್ಕೆ ಸಾಧ್ಯವಿಲ್ಲ ಅದಕ್ಕಾಗಿ ಗಂಗೆಯನ್ನೇ ಇಲ್ಲಿಗೆ ಕರೆಸು ಎಂದು ಹೆಂಡತಿಗೆ ಅಜ್ಞಾಪಿಸಿದಾಗ ಲೋಪಾಮುದ್ರೆ ಮರುಮಾತಾಡದೆ ಗಂಡನ ಪಾದಪೂಜೆ ಮಾಡಿ ಆ ತೀರ್ಥವನ್ನು ಕುಡಿದು ಗಂಗೆಯನ್ನು ಪ್ರಾರ್ಥಿಸಿದಾಗ ಗಂಗೆಯೇ ಹರಿದು ಅವರ ಮನೆಗೆ ಬರುತ್ತಾಳೆ. ನಿಜವಾದ ಪಾತಿವ್ರತ್ಯಕ್ಕೆ ಅಂತಹ ಶಕ್ತಿಯಿದೆ ಎಂದು ಇಲ್ಲಿ ಹೇಳಲಾಗಿದೆ. ಹೆಂಡತಿಯರ ಪಾತಿವ್ರತ್ಯವನ್ನು ಪರೀಕ್ಷಿಸುವ ಗಂಡಂದಿರ ಕುಹಕತನ ಈ ಕತೆಯಿಂದ ವ್ಯಕ್ತವಾಗುತ್ತದೆ. ಸತಿ ಸಾವಿತ್ರಿ ತನ್ನ ಗಂಡ ಸತ್ಯವಾನನ ಸಾವನ್ನು ಗೆದ್ದದ್ದು ಅವಳ ಪಾತಿವ್ರತ್ಯ ಶಕ್ತಿಯಿಂದಲೇ ಎಂದು ಈ ಕತೆಗಳು ಬಿಂಬಿಸುತ್ತವೆ.

ವಿವಾಹಿತಳಾದ ಸ್ತ್ರೀ ಕನಸಿನಲ್ಲಿಯೂ ಕಾಮದ ದೃಷ್ಟಿಯಿಂದ ಪರ–ಪುರುಷನನ್ನು ಕಾಣಬಾರದು ಹಾಗೆಯೇ ಕಲ್ಪಿಸಿಕೊಳ್ಳಬಾರದು. ಉದಾಹರಣೆಗೆ ರೇಣುಕೆ. ಜಮದಗ್ನಿಯ ಹೆಂಡತಿಯಾದ ರೇಣುಕೆ ನೀರು ತರಲು ಹೋಗಿ ಯಕ್ಷ–ಯಕ್ಷಿಣಿಯರ ಬಾಹುಬಂಧನವನ್ನು ನೋಡಿದ ಮಾತ್ರಕ್ಕೆ ಅವಳು ಅಪವಿತ್ರಳಾಗಿ ಗಂಡನ ಕೋಪಕ್ಕೆ ಗುರಿಯಾಗಿ ಮಗನಿಂದಲೇ ಸಾವನ್ನಪ್ಪುತ್ತಾಳೆ. ಈ ಸಮಾಜದಲ್ಲಿ ರೇಣುಕೆಯಂತಹ ಸ್ತ್ರೀಯರು ಬದುಕಿರಲು ಯೋಗ್ಯರಲ್ಲ ಎಂಬುದನ್ನು ಈ ಕತೆ ಸೂಚಿಸುತ್ತದೆ. ರೇಣುಕೆಯಂತಹ ಪರಿಸ್ಥಿತಿಯೇ ಮತ್ತೊಬ್ಬ ಋಷಿ ಪತ್ನಿ ಅಹಲ್ಯೆಯದು. ಇಂದ್ರ ಒಮ್ಮೆ ಗೌತಮ ಋಷಿಯ ವೇಷ ಧರಿಸಿ ಗೌತಮ ಋಷಿಯ ಪತ್ನಿ ಅಹಲ್ಯೆಯನ್ನು ಅಪವಿತ್ರಗೊಳಿಸಿದ್ದುದಕ್ಕಾಗಿ ಅಹಲ್ಯೆ ಶಾಪಗ್ರಸ್ಥೆಯಾಗಿ ಮರ್ಯಾದ ಪುರುಷೋತ್ತಮನಾದ ಮತ್ತೊಬ್ಬ ಪುರುಷನ ಪಾದಸ್ಪರ್ಶವಾಗುವವರೆಗೂ ಅವಳು ಕಲ್ಲಾಗಿಯೇ ಉಳಿಯಬೇಕಾಗುತ್ತದೆ.

ಈ ರೀತಿಯಾಗಿ ಅಂದಿನ ಮಹಾಕಾವ್ಯಗಳು, ಪುರಾಣಗಳು, ಕತೆಗಳು ಸೃಷ್ಟಿಸಿದ ಸ್ತ್ರೀ ಪಾತ್ರಗಳು ಹಿಂದೂಧರ್ಮದ ನೀತಿ ನಿಯಮಗಳಿಗೆ ಪೂರಕವಾಗಿ ಚಿತ್ರಣಗೊಂಡಿವೆ. ಸ್ತ್ರೀ ಹೇಗಿರಬೇಕು? ಹೇಗಿದ್ದರೆ ಈ ಸಮಾಜದಲ್ಲಿ ಅವಳು ಬದುಕಲಿಕ್ಕೆ ಸಾಧ್ಯ ಹಾಗಿದ್ದಾಗ ಸಮಾಜದಲ್ಲಿ

ಅವಳಿಗೆ ಸಿಗುವ ಮನ್ನಣೆ ಆಗಿಲ್ಲದಿದ್ದರೆ ಸಮಾಜದಿಂದ ಅವಳಿಗೆ ವಿಧಿಸುವ ಶಿಕ್ಷೆ ಎಲ್ಲವೂ ಈ ಕತೆಗಳಲ್ಲಿ ಚಿತ್ರಿತವಾಗಿವೆ.

ಸ್ತ್ರೀಯರು ಕಾಮಪಿಪಾಸುಗಳು ಪುರುಷರು ಅವರನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳಬೇಕು ಎಂದು ಮನು ಅಜ್ಞಾಪಿಸಿದ ಮೇಲೆ ಸಮಾಜದಲ್ಲಿ ಮಹಿಳೆಯನ್ನು ಬೆಳೆಸುವ ರೀತಿಯೇ ಬದಲಾಯಿತು. ಅವಳ ಬೆಳವಣಿಗೆಯುದ್ದಕ್ಕೂ 'ಹೆಣ್ತನ', 'ಪಾವಿತ್ರ್ಯತೆ', 'ಶೀಲ', 'ಪಾತಿವ್ರತ್ಯ', ಮೊದಲಾದ ಗುಣಗಳನ್ನು ಆರೋಪಿಸಲಾಯಿತು. ಹೆಣ್ಣಿಗೆ ಆರೋಪಿಸಿರುವ ಈ ಎಲ್ಲಾ ಪರಿಭಾಷೆಗಳು ಅವಳ ಲೈಂಗಿಕತೆಗೆ ಸಂಬಂಧಪಟ್ಟವುಗಳೇ ಆಗಿವೆ. ಸ್ತ್ರೀಯ ಲೈಂಗಿಕತೆಯನ್ನು ಆಧರಿಸಿ ಈ ಎಲ್ಲಾ ಗುಣಗಳನ್ನು ಅವಳ ಮೇಲೆ ಹೇರಲಾಗಿದೆ. ಹೆಣ್ಣು ಮಗು ಬೆಳೆಯುವಾಗ 'ಹೆಣ್ತನ' ವನ್ನು ಆರೋಪಿಸಿದರೆ, ಅವಳು ಪ್ರೌಢಾವಸ್ಥೆಗೆ ಬಂದಾಗ ಪಾವಿತ್ರ್ಯತೆಯನ್ನು ಆರೋಪಿಸಲಾಗಿದೆ. ವಿವಾಹವಾದ ಮೇಲೆ ಪಾತಿವ್ರತ್ಯ ಧರ್ಮವನ್ನು ಪರಿಪಾಲಿಸುವಂತೆ ನಿರ್ದೇಶಿಸಲಾಗಿದೆ. ಇವುಗಳನ್ನು ಅವಳು ತನ್ನ ಜೀವಮಾನವಿಡೀ ರಕ್ಷಿಸಿಕೊಂಡು ಬರಬೇಕು. ಈ ಎಲ್ಲಾ ಪರಿಭಾಷೆಗಳೇ ಮುಂದೆ ಅವಳನ್ನು ಕುಟುಂಬವೆಂಬ ಸಂಸ್ಥೆಯೊಳಗೆ ಬಂಧಿಸಿಡಲು ದಾರಿ ಮಾಡಿಕೊಟ್ಟವು. ಹೆಣ್ಣಿನ ಶೀಲ ಮತ್ತು ಪಾತಿವ್ರತ್ಯಗಳೇ ಪ್ರಧಾನ ಮೌಲ್ಯಗಳಾಗಿ ವಿಜೃಂಭಿಸಿದವು. ಮಹಾಕಾವ್ಯಗಳು, ಪುರಾಣ ಪುಣ್ಯಕತೆಗಳೆಲ್ಲ ಈ ಮೌಲ್ಯಗಳನ್ನೇ ತಮ್ಮ ಕತೆಗಳಲ್ಲಿ ವೈಭವೀಕರಿಸಿದವು. ಈ ಮೌಲ್ಯಗಳನ್ನು ಉಳಿಸಿಕೊಳ್ಳುವ ಸಲುವಾಗಿ ಧಾರ್ಮಿಕವಾಗಿ ಅನೇಕ ಆಚರಣೆಗಳು ರೂಢಿಗೆ ಬಂದವು.

ಹೆಣ್ಣು ಸುಶೀಲೆಯಾಗಿರಬೇಕು. 'ಶೀಲ'ವೇ ಹೆಣ್ಣಿಗೆ ನಿಜವಾದ ಆಭರಣ, ಅವಳು ಅದನ್ನು ಕಾಪಾಡಿಕೊಳ್ಳಬೇಕಾದರೆ ಬುದ್ಧಿ ಬೆಳೆಯುವುದಕ್ಕೆ ಮುನ್ನವೇ ಅವಳಿಗೊಂದು ಗಂಡನ್ನು ಗೊತ್ತು ಮಾಡಬೇಕು. ಹೀಗಾಗಿ ಹೆಣ್ಣು ಮಕ್ಕಳು ಚಿಕ್ಕ ವಯಸ್ಸಿನಲ್ಲಿದ್ದಾಗಲೇ ಹುಡುಗನೊಂದಿಗೆ ವಿವಾಹವನ್ನು ನಿಶ್ಚಯಿಸಲಾಗುತ್ತಿತ್ತು. ಋತುಮತಿಯಾಗುವ ಮುನ್ನವೇ ಮದುವೆ ಮಾಡಿ ಆ ನಂತರ ಗಂಡನ ಮನೆಗೆ ಕಳುಹಿಸಲಾಗುತ್ತಿತ್ತು. ವಿವಾಹವೆಂದರೇನು? ಎಂದು ತಿಳಿಯುವ ಮುನ್ನವೇ ನಡೆಯುತ್ತಿದ್ದ ಬಾಲ್ಯವಿವಾಹಗಳಿಂದಾಗಿ ಹೆಣ್ಣು ಮಕ್ಕಳು ಅನೇಕ ದೈಹಿಕ ಹಾಗೂ ಮಾನಸಿಕ ಹಿಂಸೆಗೆ ಗುರಿಯಾಗುತ್ತಿದ್ದರು.

ಮದುವೆಯಾದ ಮೇಲೆ 'ಪಾತಿವ್ರತ್ಯ' ಧರ್ಮವನ್ನು ಪಾಲಿಸಿಕೊಂಡು ಬರಬೇಕಾದುದು ಅವಳ ಆದ್ಯ ಕರ್ತವ್ಯವಾಗಿತ್ತು. ಅನ್ಯ ಪುರುಷರನ್ನು ಕಾಮದ ದೃಷ್ಟಿಯಿಂದ ನೋಡುವುದು ಮಹಾಪಾಪಕರವಾಗಿತ್ತು. ಅವರು ಪರ ಪುರುಷರನ್ನು ಮಾತನಾಡಿಸುವುದಾಗಲೀ, ನೋಡುವುದಾಗಲೀ ನಿಷಿದ್ಧವಾಗಿತ್ತು. ವಿವಾಹವಾದ ಮಹಿಳೆ ಈ ಎಲ್ಲಾ ಗುಣಗಳನ್ನು ಆರೋಪಿಸಿಕೊಂಡು ಬಾಳ್ವೆ ಮಾಡಬೇಕಿತ್ತು. ಈ ಕಾರಣದಿಂದಾಗಿ ಮದುವೆಯಾದ ಮೇಲೆ ಗಂಡ ಸತ್ತರೆ ಅವಳ ಪಾತಿವ್ರತ್ಯಕ್ಕೆ ಭಂಗಬರಬಾರದೆಂಬ ಕಾರಣಕ್ಕಾಗಿ ಸತ್ತ ಗಂಡನೊಂದಿಗೆ ಜೀವಂತ ಸತಿಯೂ ಚಿತೆಯೇರಬೇಕಾಗಿತ್ತು. ಕೆಲವೊಮ್ಮೆ ಬಲವಂತವಾಗಿ ಅವರನ್ನು ಚಿತೆಗೆ ತಳ್ಳಲಾಗುತ್ತಿತ್ತು. ಅವಳು ಬದುಕುಳಿಯುವುದೇ ಆದರೆ ಕೆಂಪು ಸೀರೆಯುಟ್ಟುಕೊಂಡು, ಕೇಶಮುಂಡನ ಮಾಡಿಸಿಕೊಂಡು ಯಾವ ಸಮಾರಂಭಗಳಲ್ಲಿಯೂ ಭಾಗವಹಿಸದೆ ಗಂಡನ ಮನೆಯಲ್ಲಿ ಸೇವಕಿಯಾಗಿ ಗೃಹಕೃತ್ಯಗಳನ್ನು ನಿರ್ವಹಿಸಿಕೊಂಡು ಜಪತಪ ಮಾಡುತ್ತಾ ಕಾಲಕಳೆಯಬೇಕಾಗಿತ್ತು. ಇವರಿಗೆ ಮರುವಿವಾಹದ ಅವಕಾಶವಿರಲಿಲ್ಲ. ಈ ಎಲ್ಲಾ ಕಟ್ಟುಪಾಡುಗಳು ಪುರುಷರಿಗೆ ಅನ್ವಯವಾಗುತ್ತಿರಲಿಲ್ಲ. ಸ್ತ್ರೀಯ ಪಾವಿತ್ರ್ಯವನ್ನು ಕಾಪಾಡಬೇಕೆಂಬ

ನಿಟ್ಟಿನಿಂದ ರೂಪಿತವಾದ ಇಂತಹ ಆಚರಣೆಗಳನ್ನು ವೈಭವದಿಂದಲೇ ನಡೆಸಿಕೊಂಡು ಬಂದ ಭಾರತೀಯ ಪುರುಷ ಪ್ರಧಾನ ಸಮಾಜಕ್ಕೆ ಈ ಆಚರಣೆಗಳಿಂದ ಸ್ತ್ರೀಯರಿಗಾಗುತ್ತಿದ್ದ ಮಾನಸಿಕ ಮತ್ತು ದೈಹಿಕ ಹಿಂಸೆ ದೌರ್ಜನ್ಯಗಳ ಕಡೆಗೆ ಲಕ್ಷ್ಯವಿರಲಿಲ್ಲ.

ಮನು ರೂಪಿಸಿದ ಧರ್ಮಸೂತ್ರಗಳು ಮಹಿಳೆಯರನ್ನು ಶೋಷಿಸಲು ಹಾಗೂ ಪುರುಷರು ಅವರ ಮೇಲೆ ದೌರ್ಜನ್ಯ ಮಾಡಲು ದಾರಿಮಾಡಿಕೊಟ್ಟಿತು. ಗೃಹದೊಳಗೆ ಬಂಧಿಯಾದ ಮಹಿಳೆಯರು ಪತಿಯಿಂದ ಮತ್ತು ಅವರ ಕುಟುಂಬದಿಂದ ಅನುಭವಿಸುವ ಯಾತನೆಗಳನ್ನು ಹೊರಪ್ರಪಂಚಕ್ಕೆ ತಿಳಿಸಲಾರದೆ ಕೊರಗಲಾರಂಭಿಸಿದರು. ಹೆಣ್ಣು ಮಗು ಹುಟ್ಟಿದ ಕೂಡಲೇ ಸಾಯಿಸುವುದು, ಚಿಕ್ಕ ವಯಸ್ಸಿಗೆ ಮದುವೆ ಮಾಡುವುದು, ಗಂಡ ಸತ್ತರೆ ಸಹಗಮನಕ್ಕೆ ಒಳಪಡಿಸುವುದು. ಇಲ್ಲವೇ ತಲೇ ಬೋಳಿಸಿ ಕೆಂಪು ಸೀರೆ ಉಡಿಸಿ ವಿಕಾರ ರೂಪಿಯನ್ನಾಗಿ ಮಾಡುವುದು, ಸ್ತ್ರೀಗೆ ಶಿಕ್ಷಣ ನೀಡದೆ ವಂಚಿಸಿರುವುದು ಇವೇ ಮೊದಲಾದ ಅಮಾನವೀಯ ಆಚರಣೆಗಳಿಂದ ಸ್ತ್ರೀ ಸಮುದಾಯ ನಲುಗಲಾರಂಭಿಸಿತು.

**ಪರಾಮರ್ಶನ ಗ್ರಂಥಗಳು**

1. ಮಹಿಳಾ ಚಳುವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ಹಾಲತಿ ಸೋಮಸೇಖರ್ ವಿಸ್ಮಯ ಪ್ರಕಾಶನ ಮೈಸೂರು – 2007
2. ಮಹಿಳೆ ಸಮಾಜ ಮತ್ತು ಸವಾಲುಗಳು ಪ್ರೇಮಾ ಸಿರ್ಸೆ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು– 2006
3. ಆಧುನಿಕ ಭಾರತದಲ್ಲಿ ಇತಿಹಾಸ ಚಂದ್ರಶೇಖರಪ್ಪ.ಟಿ.ಜಿ. ಪೂರ್ಣ ಪ್ರಕಾಶನ ಶಿವಮೊಗ್ಗ 2006.
4. ಹೆಣ್ಣು– ಹೆಂಗಸು ಶ್ರೀಮತಿ ಎಚ್.ಎಸ್. ಬ್ಯಾಲದಕೆರೆ ಪ್ರಕಾಶನ, ಮಂಡ್ಯ– 2004.
5. ಮಹಿಳೆ ಬಿಡುಗಡೆಯ ಹಾದಿಯಲ್ಲಿ ಗಾಯತ್ರಿ.ಎನ್. ನವಕರ್ನಾಟಕ ಪ್ರಕಾಶನ 1996 (ಮೂರನೇ ಮುದ್ರಣ)